These services are also party catering to the needs of the residents of in Hennur-Banswadi Layout First Block. The II Block of Hennur-Banswadi Layout is being catered to by 4 buses on the route Shivajinagar-Kammanhalli and 2 buses on the route Bangalore Bus Station to Kammanahalli.

The existing services which are being operated as above are adequately catering to the needs of the Hennur Banswadi Layout I Blockj and II Block. The Services on the routes No. 137-D are being operated between H.A.L. III Stage and Periyar Nagar Circle via H.A.L. II Stage, Ulsoor, Ajantha Talkies, Cox Town Circle, Pulikeshinagar. This is a City Services.

The Hennur-Banaswadi Layout is located outside the Corporation limits. As such the services cannot be extended. If it is extended, it gets converted slightly higher than the City Services. Therefore, it is not feasible to extend the services on Route No. 137-D to Hennur-Banswadi Layout.

ನೀವು ಕೇಳಿದ ಮೇಲೆ ಹೆಣ್ಣೂರುಬಾಣಸವಾಡಿ ಲೇಔಟ್ ಏನಿದೆ ಅದು ಇನ್ನೂ ಬಿ.ಡಿ.ಎ.ನವರ ಹತ್ತಿರವೇ ಇರುವುದರಿಂದ ಅವರು ಈ ಲೇಔಟನ್ನು ಕಾರ್ಪೊರೇಷನ್‌ಗೆ ಹ್ಯಾಂಡ್‌ಓವರ್ ಮಾಡಿದ ಮೇಲೆ ಅದು ಸಿಟಿ ಲಿಮಿಟ್‌ಗೆ ಬರುತ್ತದೆ. ಆಗ ಸಿಟಿ ಸರ್ವಿಸಸ್ ಅನ್ನು ಹೆಚ್ಚು ಮಾಡಬಹುದು.

7) **ಬೈಲಹೊಂಗಲಕ್ಕೆ ಕುಡಿಯುವ ನೀರಿನ ಸೌಕರ್ಯದ ಬಗ್ಗೆ.**

ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪಾಧ್ಯಕ್ಷೆಯವರೆ, ಬೆಳಗಾಂ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಕುಡಿಯುವ ನೀರಿನ ತೊಂದರೆ ಬಹಳವಾಗಿದೆ. ಎಕ್ಸ್‌ಟೆನ್‌ಷನ್ ಏರಿಯಾದಲ್ಲಿ ವಾರದಲ್ಲಿ ಒಮ್ಮೆ ಕೂಡ ನೀರು ಸಿಕ್ಕುವುದಿಲ್ಲ, ಆದಕಾರಣ ಕೂಡಲೇ ಅಲ್ಲಿ 25 ಕೊಳವೆಬಾವಿಗಳನ್ನು ತೋಟಲು ಆದೇಶ ನೀಡಬೇಕೆಂದು ನಾನು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನಸೆಳೆಯಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷೆಯವರೆ, ಬೈಲಹೊಂಗಲ ಪಟ್ಟಣದ ಜನಸಂಖ್ಯೆಯು 1981ರ ಜನಗಣತಿಯ ಪ್ರಕಾರ 26, 465 ಆಗಿದ್ದು ಈಗಿನ ಜನಸಂಖ್ಯೆ ಸುಮಾರು 35,000 ಇರುತ್ತದೆ. ಈ ಪಟ್ಟಣಕ್ಕೆ ಹಾಲಿ ನೀರು ಸರಬರಾಜನ್ನು ಮಲಪ್ರಭಾ ನದಿಯಿಂದ ಮಾಡಲಾಗುತ್ತಿದೆ. ಹಾಲಿ ದಿನ ಪ್ರತಿ ತಲಾ 70 ಲೀಟರ್‌ನಂತೆ (15 ಗ್ಯಾಲನ್) ನೀರು ಸರಬರಾಜು ಮಾಡಲಾಗುತ್ತಿದೆ. ಎಕ್ಟೆನ್ಷನ್ ಏರಿಯಾಗಳಲ್ಲಿ ನೀರಿನ ಸಂಗ್ರಹಣಾಗಾರಗಳು ಮತ್ತು ಪೈಪ್‌ಲೈನ್ ಇರುವುದಿಲ್ಲ, ಈ ಏರಿಯಾಗಳಿಗೆ ನೀರಿನ ಜಲಾಗಾರಗಳನ್ನು ಮತ್ತು ಪೈಪ್‌ಲೈನ್‌ಗಳನ್ನು ಸರ್ಕಾರ ಮಾರ್ಚ್ 1990ರಲ್ಲಿ ಮಂಜೂರಾತಿ ನೀಡಿರುವ 80 ಲಕ್ಷ ರೂ.ಗಳ ಹೊಸ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಾಡಲಾಗುತ್ತಿದೆ. ಈ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಈ ಪಟ್ಟಣದಲ್ಲಿ 29 ಕೊಳವೆಬಾವಿಗಳಿದ್ದು, 25 ಕೊಳವೆಬಾವಿಗಳು ಸಹ ಕೆಲಸ ಮಾಡು ಕೆಲಸಮಾಡುತ್ತಿವೆ. 22 ಕೊಳವೆಬಾವಿಗಳಿಗೆ ಕೈ ಪಂಪುಗಳನ್ನು ಮತ್ತು 3 ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪುಗಳನ್ನೂ ಅಳವಡಿಸಲಾಗಿದೆ. ಇತ್ತೀಚೆಗೆ ಬೆಳಗಾಂನ ಜಿಲ್ಲಾಧಿಕಾರಿಗಳು 4 ಕೊಳವೆ ಬಾವಿಗಳನ್ನ ಬೈಲಹೊಂಗಲ ಪಟ್ಟಣದಲ್ಲಿ ಕೊರೆಯಲು ಮಂಜೂರು ಮಾಡಿರುತ್ತಾರೆ. ಏಟೆನ್ಷನ್ ಏರಿಯಾದಲ್ಲಿ ನೀರಿನ ಅಭಾವವನ್ನು ನೀಗಿಸಲು ಇನ್ನೂ ಹೆಚ್ಚಿನ ಕೊಳವೆಬಾವಿಗಳನ್ನು ಮಂಜೂರು ಮಾಡಲು ಇದೂ

ಅಲ್ಲಿದೆ ಪುರಸಭೆಯ ಟ್ಯಾಂಕರ್‌ಗಳ ಮೂಲಕ ನೀರನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗುವುದು.

ಶಾಸನ ರಚನೆ ಕಾರ್ಯಕಲಾಪಗಳು

1991ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ ಮಂಡವ ಅನುಮತಿ ಕೋರಿಕೆ

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆಯವರೆ?

1991ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇವೆ.

ಉಪಾಧ್ಯಕ್ಷಿಣಿಯವರು: ಪ್ರಸ್ತಾವ ಏನೆಂದರೆ : "1991ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು".

+ ಶ್ರೀ ಡಿ.ಬಿ. ಚಂದ್ರೇಗೌಡ (ವಿತೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷಿಣಿಯವರೆ, ಇದನ್ನು ಸ್ವಾಗತ ಮಾಡುವುದಕ್ಕಾದರೂ ನನಗೆ ಅವಕಾಶವನ್ನು ಕೊಡಿ. ಇದರ ಉದ್ದೇಶ ನನಗೆ ಗೊತ್ತಿದೆ. ಉದ್ದೇಶದ ವಿವರಕ್ಕೆ ನಾನು ಹೋಗುವುದಿಲ್ಲ. ಕೊನೆಯ ಪಕ್ಷದ ಇದು ರೆಕಾರ್ಡ್‌ನಲ್ಲಾದರೂ ಇರಲಿ. ಇದು ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿದ್ದ ವಿಚಾರ ಇಲ್ಲಿ ಸರ್ಕಾರ ಒಂದು ನಿರ್ಧಾರವನ್ನೇನೋ ತೆಗೆದುಕೊಂಡಿದೆ. ಈ ಬಗ್ಗೆ ಶಾಸನಬದ್ಧವಾದ ತೊಂದರೆಗಳು ಏನಿದೆಯೋ ನನಗೆ ತಿಳಿಯುವುದಿಲ್ಲ. ಇದೇ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಗಳಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ಜನವರಿ 26ನೇ ತಾರೀಖು ಮತ್ತು ಆಗಸ್ಟ್ 15ನೇ ತಾರೀಖು ರಾಷ್ಟ್ರಧ್ವಜವನ್ನು ಹಾರಿಸತಕ್ಕ ಕಾರ್ಯಕ್ರಮ ಏನಿದೆ. ಇದೂ ಕೂಡ ಬಾವುಟಗಳ ವ್ಯಾಪ್ತಿಯಲ್ಲಿ ಬರತಕ್ಕ ನಿಯಮ ಇದೆ. ಆ ನಿಯಮದಲ್ಲಿ ನೀವು ಏನು ಹೇಳಿದ್ದೀರಿ. ತಾಲ್ಲೂಕಿನ ಮತ್ತು ಜಿಲ್ಲೆಯ ಎಕ್ಸಿಕ್ಯುಟಿವ್ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾಧಿಕಾರಿ ಅಥವಾ ತಹಸಿಲ್ದಾರರು ಬಾವುಟವನ್ನು ಹಾರಿಸುವುದಕ್ಕೆ ಅವಕಾಶ ಇದೆ ಎಂದು ಇಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಅವಕಾಶವಿಲ್ಲ. ಆದರೆ ಚುನಾಯಿತ ಪ್ರತಿನಿಧಿಗಳು ಈ ಬಾವುಟವನ್ನು ಹಾರಿಸಬಾರದೆಂದು ಎಲ್ಲೂ ನಿಬಂಧನೆ ಇಲ್ಲ. (ಇದು ಫ್ಲ್ಯಾಗ್ ಆಕ್ಟ್ ಕೆಳಗಡೆ) ಇದನ್ನು ಸಹ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ಸಂದರ್ಭದಲ್ಲಿ ತರಬಯಸುತ್ತೇನೆ.

ಜನವರಿ 26ನೇ ತಾರೀಖು ಇರಬಹುದು ಅಥವಾ ಆಗಸ್ಟ್ 15ನೇ ತಾರೀಖು ಇರಬಹುದು. ಈ ಸಂದರ್ಭದಲ್ಲಿ ತಹಸಿಲ್ದಾರ್‌ರವರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಬಾವುಟವನ್ನು ಹಾರಿಸತಕ್ಕ ಒಂದು ಅಧಿಕಾರ ಏನಿದೆ ಅದನ್ನು ಪುನರ್ ಪರಿಶೀಲನೆ ಮಾಡಿ, ಎಲ್ಲೆಲ್ಲಿ ಚುನಾಯಿತ ಪ್ರತಿನಿಧಿಗಳಿರುತ್ತಾರೆ. ಅವರಿಗೆ ಗೌರವವನ್ನು ಕೊಡಬೇಕು. ಇದನ್ನು ಕೊಡಬಾರದೆಂದು ಎಲ್ಲೂ ಹೇಳಿಲ್ಲ. ಇಲ್ಲಿ ಇಂಟರ್‌ಪ್ರಿಟೇಷನ್ ಏನು ಮಾಡುತ್ತಾರೆ ಎಂಬುದನ್ನು ತಾವು ನೋಡಬೇಕು. ಎಕ್ಸಿಕ್ಯುಟಿವ್ ಹೆಡ್ ಅನ್ನುವಾಗ ಎಕ್ಸಿಕ್ಯುಟಿವ್ ಹೆಡ್ ಯಾರು? ಸರ್ಕಾರದ ಪ್ರತಿನಿಧಿಗಳದ್ದು.

ಅಧ್ಯಕ್ಷರು : ಮಾನ್ಯ ಸದಸ್ಯರ ತಿದ್ದುಪಡಿಯನ್ನು ವಾಪಸ್ಸು ಪಡೆಯಲು ಸಭೆ ಅನುಮತಿ ನೀಡಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಮಾನ್ಯ ಆಹಾರಮಂತ್ರಿಗಳು ಇಲ್ಲೇ ಇರುವುದರಿಂದ ನಾನು ತಮ್ಮ ಮುಖಾಂತರ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.